ಮುಳಬಾಗಿಲು ತಾಲ್ಲೂಕಿನ ಖಾಸಗಿ ವಿದ್ಯಾ ಸಂಸ್ಥೆಗಳನ್ನು ಸರ್ಕಾರ ತೆಗೆದುಕೊಳ್ಳುವ ಬಗ್ಗೆ

೧೮೬೮. ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ನಡೆಸುತ್ತಿರುವ ಖಾಸಗಿ ವಿದ್ಯಾ ಸಂಸ್ಥೆಯ ಕಾಲೇಜನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುವುದೆ ?

ಆ) ಮುಳಬಾಗಿಲು ತಾಲ್ಲೂಕಿನಲ್ಲಿನ ಬೈರಕೋಡು, ಅವಣಿ ಮತ್ತು ನಂಗಲಿ ಗ್ರಾಮಗಳ ಖಾಸಗಿವಿದ್ಯಾಸಂಸ್ಥೆಗಳನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳುವ ಯೋಜನೆಯಿದೆಯೆ ?

ಇ) ಮುಳಬಾಗಿಲಿನಲ್ಲಿರುವ ಕಾಲೇಜು ಬೈರಕೋಡು ಮತ್ತು ನಂಗಲಿಯಲ್ಲಿರುವ ಕಿರಿಯ ಕಾಲೇಜುಗಳು ಹಾಗೂ ಅವಣಿ ಪ್ರೌಢಶಾಲೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಉದ್ದೇಶ ವಿದೆಯೇ ?

ಈ) ಈ ಹಿಂದೆಯೇ ೬ಳಿ ಶಾಲೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ತೀರ್ಮಾನ ಕೈಗೊಂಡಿರುವುದು ನಿಜವೆ ?

ಉ) ಹಾಗಿದ್ದಲ್ಲಿ, ೬ಳಿ ಶಾಲೆಗಳನ್ನು ಸರ್ಕಾರದವರು ಯಾವಾಗ ವಹಿಸಿಕೊಳ್ಳುವರು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಮುಳಬಾಗಿಲಿನ ಖಾಸಗಿ ವಿದ್ಯಾಸಂಸ್ಥೆಯ ಕಾಲೇಜನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಬಗ್ಗೆ ಒಪ್ಪಿಗೆಯನ್ನು ಕೇಳಲಾಗಿದೆ. ಆಡಳಿತ ಮಂಡಳಿಯಿಂದ ಉತ್ತರ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಪ್ರೌಢಶಾಲೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಕಿರಿಯ ಕಾಲೇಜುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಪ್ರಸ್ತಾವನೆ ಬಂದಿರುವುದಿಲ್ಲ.

ಇ) ಪ್ರಶ್ನೆ (ಅ) ಮತ್ತು (ಆ)ಗಳಿಗೆ ಕೊಟ್ಟಿರುವ ಉತ್ತರವು ಈ ಪ್ರಶ್ನೆಗೂ ಅನ್ವಯವಾಗುತ್ತದೆ.

ಈ) ಅನುದಾನ ಪಡೆಯುವ ಖಾಸಗೀ ಪ್ರೌಢಶಾಲೆಗಳನ್ನು ಸರಕಾರ ವಹಿಸಿಕೊಳ್ಳುವ ಬಗ್ಗೆ ತೀರ್ಮಾನಿಸಿದ್ದು ಈ ವಿಷಯದಲ್ಲಿ ನೀತಿ ನಿಯಮಗಳನ್ನು ರೂಪಿಸಬೇಕಾಗಿದೆ.

ಉ) ಆದಷ್ಟು ಬೇಗ.

೧೯೬೬–೬೭ನೇ ಸಾಲಿನಲ್ಲಿ ಡಿ.ಸಿ.ಎಚ್. ಹಿ೦ ಬೀಜೋತ್ಪಾದನಾ ಕಾರ್ಯಕ್ರಮ ಬಗ್ಗೆ

೧೮೭೭. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೬–೬೭ನೇ ಸಾಲಿನಲ್ಲಿ ಡಿ.ಸಿ.ಹೆಚ್. ಹಿ೦ ಹತ್ತಿ ಬೀಜೋತ್ಪಾದನೆ ಕೈಗೊಳ್ಳಲು ಉದ್ದೇಶಿಸಲಾಗಿದೆಯೆ ?

ಆ) ಹಾಗಾದಲ್ಲಿ ಎಷ್ಟು ಕ್ಷೇತ್ರದಲ್ಲಿ ಬೀಜೋತ್ಪಾದನೆ ಮಾಡಲು ಉದ್ದೇಶಿಸಲಾಗಿದೆ ?

ಇ) ಬೀಜೋತ್ಪಾದನೆಯ ತಾಕುಗಳನ್ನು ರೈತರಿಗೆ ಕೊಡಲು ಯಾವ ಕ್ರಮವನ್ನು ಅನುಸರಿಸಲಾಗುವುದು ?

ಈ) ಬೀಜೋತ್ಪಾದನೆ ಕಾರ್ಯದಲ್ಲಿ ರೈತರು ಭಾಗವಹಿಸಲು ಅನುಕೂಲವಾಗುವಂತೆ ಸರ್ಕಾರದವರು ಯಾವುದಾದರೂ ಮಾರ್ಗದರ್ಶನ ಸೂತ್ರಗಳನ್ನು ಅನುಸರಿಸುವರೆ ?